# ಜಾಣರ ಪೆಟ್ಟಿಗೆ

## ಅಡಿಗೆ ಹೇಗಿದ್ದರೂ, ಊಟ ಮಾಡ್ತಾರೆ!

ಈ ಟಿವಿಯಲ್ಲಿ ಎಸ್ಪಿಯವರ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮ ನೂರಾರು ಸಂಚಿಕೆಗಳನ್ನು ಯಶಸ್ವಿಯಾಗಿ ಪೂರೈಸಿದೆ. ರವಿ ಬೆಳಗೆರೆ ನಡೆಸಿಕೊಡುವ 'ಎಂದೂ ಮರೆಯದ ಹಾಡು' ಸಹಾ ಇದೇ ಸಾಲಿಗೆ ಸೇರುತ್ತದೆ. ಬೇಂದ್ರೆರವರ ಕಾರ್ಯಕ್ರಮ ನಿಜಕ್ಕೂ ಅನುಪಮವೇ. ಹಾಗೆಯೇ 'ಮಧುರ ಮಧುರವೀ ಮಂಜುಳ ಗಾನ' ಚಂದನ ವಾಹಿನಿಯ ಹೈಲೈಟ್ ಎಂದರೆ ತಪ್ಪಾಗಲಾರದು. ಈ ಎಲ್ಲಾ ಕಾರ್ಯಕ್ರಮಗಳೂ ನಮ್ಮ ಚಿತ್ರಗೀತೆಗಳ ಮೇಲೆಯೇ ಅವಲಂಬಿತವಾಗಿರುವುದು ವಿಶೇಷ. ಚಂದನದಲ್ಲಿ ದಾಸರ ಪದಗಳು, ತ್ಯಾಗರಾಜರ ಆರಾಧನೆ ಸಹಾ ನಡೆದದ್ದು ಚಂದನ ವಾಹಿನಿಯ ಶ್ರೇಷ್ಠತೆಗೆ ಕನ್ನಡಿ ಹಿಡಿಯಿತು.

ಈ ಎಲ್ಲಾ ಕಾರ್ಯಕ್ರಮಗಳನ್ನು ವೀಕ್ಷಿಸಿದಾಗ ನಮಗೆ ಎದ್ದು ಕಾಣುವುದು ಇವುಗಳ ಏಕತಾನತೆ. ಅದೇ ನಿರೂಪಕರು... ಅದೇ ತೀರ್ಪುಗಾರರು... ಅದೇ ವಿಮರ್ಶೆ... ಅದೇ ಪ್ರೇಕ್ಷಕರು... ಇವೆಲ್ಲಾ ಬದಲಾಗುವುದೇ ಇಲ್ಲವೆ? ಈ ಟಿವಿಯವರಿಗೆ ಜಯಂತ ಕಾಯ್ಕಿಣಿ ಬಿಟ್ಟು ಕನ್ನಡದಲ್ಲಿ ಬೇರೆ ಪ್ರತಿಭೆಗಳು ಕಣ್ಣಿಗೆ ಕಾಣುವುದೇ ಇಲ್ಲವೇನೋ? ಹಾಗೆಯೇ ಚಂದನದಲ್ಲೂ ಅದೇ ಹಾಡುಗಾರರೇ– ಪುನರಾವರ್ತನೆ ಆಗುತ್ತಲೇ ಇದ್ದಾರೆ. ಇವರ ಜತೆಗೆ ನಿರ್ದೇಶಕ ಮಹೇಶ್ ಜೋಶಿಯವರೂ ತಮ್ಮ 'ಕಂಠಸಿರಿ'ಯಿಂದ ವೀಕ್ಷಕರನ್ನು ಕಾಡುತ್ತಾರೆ! ಮುಂದೆ ಹೋದಂತೆ ಪ್ರಬುದ್ಧತೆ ಬೆಳೆಯಬೇಕು. ಆದರೆ ಸಂಚಿಕೆ ಆರಂಭವಾದಾಗ ಯಾವ ಸ್ಥಿತಿಯಲ್ಲಿದ್ದವೋ ಈಗಲೂ ಅದೇ ಸ್ಥಿತಿ ಇರುವುದು ದುರದೃಷ್ಟಕರ. ಇವುಗಳ ಸೃಜನಶೀಲತೆ ನಿಂತ ನೀರಾಗಿದೆಯೇ ಎಂಬ ಅನುಮಾನ ಕಾಡುತ್ತದೆ.

ಈ ಸಂಗೀತ ಆಧರಿತ ಕಾರ್ಯಕ್ರಮಗಳಿಗೆ ವೀಕ್ಷಕರು ಅಪಾರ ಸಂಖ್ಯೆಯಲ್ಲಿದ್ದಾರೆ, ನಿಜ. ಅದಕ್ಕೆಂದೇ ನಾವು ಹೇಗೆ ಅಡಿಗೆ ಮಾಡಿದರೂ ಜನ ಊಟ ಮಾಡುತ್ತಾರೆ ಎಂಬ ಭಾವನೆ ಬಂದಿರಬೇಕು. ಈ ಮನೋಭಾವ ಬದಲಾಗಬೇಕು.

–ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ

## ಸೆಲೆಬ್ರಿಟಿಗಳೇ ಯಾಕೆ?

ಟಿ.ವಿ. ಚಾನೆಲ್‌ಗಳು ರಿಯಾಲಿಟಿ ಶೋ ನಡೆಸುವಾಗ ಹೆಚ್ಚಾಗಿ ಸೆಲೆಬ್ರಿಟಿಗಳನ್ನು ಆಯ್ಕೆ ಮಾಡಿಕೊಂಡು ಬಹುಮಾನವಾಗಿ ಸಾವಿರಾರು, ಲಕ್ಷಾಂತರ ರೂ. ನೀಡುತ್ತಾರೆ. ಇದು ಹೊಟ್ಟೆ ತುಂಬಿದವರಿಗೆ ಹೊಟ್ಟೆ ಮೇಲೆ ಕಟ್ಟಿದಂತೆ! ಆದರೆ ಝೀ ಕನ್ನಡ ಚಾನೆಲ್ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ನೆರವಿಗೆ ಯೋಗ್ಯವಾಗಿರುವ ಮಹಿಳೆಯರನ್ನು ಗುರುತಿಸಿ 'ನಮ್ಮೂರ ಮಹಾರಾಣಿ' ಶೋ ನಡೆಸಿ ಅವರಿಗೆ ಸ್ಫೂರ್ತಿ ನೀಡುವ ಕಾರ್ಯ ಮಾಡುತ್ತಿದೆ. ಇದು ಸ್ತುತ್ಯರ್ಹ. ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಇಂತಹ ಕಾರ್ಯಕ್ರಮಗಳನ್ನು ಎಲ್ಲ ಚಾನೆಲ್‌ಗಳು ಆಯೋಜಿಸಿ ಪ್ರಸ್ತುತಪಡಿಸಿದರೆ ಇನ್ನೂ ಹೆಚ್ಚಿನ ಸಾಮಾಜಿಕ ಕಳಕಳಿ ತೋರಿಸಿದಂತಾಗುತ್ತದೆ.

–ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಪ್ರತಿಕ್ರಿಯೆ

### ಚಿನ್ನ ಕಬ್ಬಿಣದಿಂದ ಅಲ್ಲ

'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಜಯಂತ ಕಾಯ್ಕಿಣಿಯವರು ಕೆ.ಜಿ.ಎಫ್.ನ ಗಣಿಯಲ್ಲಿ ಕಬ್ಬಿಣವನ್ನು ಸಂಸ್ಕರಿಸಿ ಚಿನ್ನವನ್ನು ತಯಾರಿಸಲಾಗುತ್ತದೆ ಎಂದು ಹೇಳಿದರು! ಇದು ತಪ್ಪು. ಕಾರಣ, ಮಣ್ಣಿನಲ್ಲಿ ದೊರೆಯುವ ಕಚ್ಚಾ ಚಿನ್ನವನ್ನು ಸಂಸ್ಕರಿಸಿ, ಅದನ್ನು ಶುದ್ಧ ಚಿನ್ನವನ್ನಾಗಿ ತಯಾರಿಸಲಾಗುತ್ತದೆ. ಕಬ್ಬಿಣದಿಂದಲೇ ಚಿನ್ನವನ್ನು ತಯಾರಿಸುವುದಾಗಿದ್ದರೆ ಬಳ್ಳಾರಿ ಜಿಲ್ಲೆಯ ಕಬ್ಬಿಣದ ಗಣಿಗಳೆಲ್ಲಾ ಚಿನ್ನದ ಗಣಿಗಳಾಗಿ, ಚಿನ್ನದ ನಾಡಾಗುತ್ತಿತ್ತು!

–ಎನ್. ಪ್ರಕಾಶ, ದೇವನಹಳ್ಳಿ

### ಕೃಷ್ಣಾಜಿನ ಪೆಟ್ಟಿಗೆ ಏಕಿಲ್ಲ?

'ಗುರು ರಾಘವೇಂದ್ರ ವೈಭವ'ದಲ್ಲಿ ವೆಂಕಟನಾಥರು ಹಲವಾರು ಬಾರಿ ಪೂಜೆ ಸಲ್ಲಿಸುವುದನ್ನು ಚಿತ್ರಿಸಲಾಗಿದೆ. ಆದರೆ ಮಂಟಪದಲ್ಲಿ ಕೇವಲ ದೇವರ ಮೂರ್ತಿಗಳಿರುತ್ತವೆ. ಆಸ್ತಿಕರ ಹಾಗೂ ಮಡಿವಂತರ ಮನೆಗಳಲ್ಲಿ ಕೃಷ್ಣಾಜಿನ ಪೆಟ್ಟಿಗೆಯಲ್ಲಿ ಸಾಲಿಗ್ರಾಮಗಳನ್ನಿರಿಸಿ ಪೂಜಿಸುವುದು ವಾಡಿಕೆ. ಆದರೆ ಇಂಥಹ ಕೃಷ್ಣಾಜಿನ ಪೆಟ್ಟಿಗೆ (ಬರಿದಾದರೂ) ಕಾಣುವುದೇ ಇಲ್ಲ. ಇದು ತೀರಾ ಅವಾಸ್ತವಿಕ.

–ತರಂಗಿಣಿ, ತುಮಕೂರು

### ಪಾತ್ರ ಬದಲಾವಣೆ ಕಿರಿಕಿರಿ

ಒಂದು ಧಾರಾವಾಹಿಯಲ್ಲಿಯ ಕೆಲವು ಪಾತ್ರಗಳ ಅಭಿನಯ ವೀಕ್ಷಕರಿಗೆ ತುಂಬ ಹಿಡಿಸಿರುತ್ತದೆ. 'ಮಹಾನವಮಿ' ಧಾರಾವಾಹಿ ಆರಂಭಗೊಂಡಾಗ ಅದರಲ್ಲಿನ ಸೀತಕ್ಕ, ಸುಶೀಲಾ ಮತ್ತು ಕಾವೇರಿಯ ಪಾತ್ರಗಳು ತುಂಬ ಮೆಚ್ಚುಗೆಯಾಗಿದ್ದವು.

ಮೊದಲಿಗೆ ಕಾವೇರಿ ಪಾತ್ರ ಬದಲಾವಣೆಯಾಯಿತು. ಇತ್ತೀಚೆಗೆ ಸೀತಕ್ಕ, ಸುಶೀಲಾ ಮತ್ತು ಸದು ಮಾಮಾನ ಪಾತ್ರಗಳೂ ಬದಲಾಗಿವೆ. ಆದರೆ ಮೊದಲಿನ ಸೀತಕ್ಕನ ಗತ್ತು, ದೌಲತ್ತು ಈಗಿನ ಸೀತಕ್ಕನ ಪಾತ್ರದಲ್ಲಿ ಕಂಡುಬರುತ್ತಿಲ್ಲ. ಮೊದಲಿನ ಕಾವೇರಿ ಈಗಿಲ್ಲ. ಇದರಿಂದ ಧಾರಾವಾಹಿಯೇ ಕಳೆಗುಂದಿದೆ.

'ಮುತ್ತಿನ ತೋರಣದ' ಕಲಾ ಮತ್ತು 'ಮುಕ್ತ ಮುಕ್ತ'ದ ಚಿದಾನಂದ ಕೂಡ ಬದಲಾಗಿದ್ದಾರೆ. ಪೆದ್ದು ಪೆದ್ದಾಗಿ ಆಡುವ ಮುಕ್ತ ಮುಕ್ತದ ಶಾರದಾ ಶ್ರೀಕಂಠಮೂರ್ತಿಯ ಪಾತ್ರವನ್ನು ಬದಲಾಯಿಸಿದರೆ ವೀಕ್ಷಕರಿಗೆ ರಸಭಂಗವಾಗುವುದಿಲ್ಲವೆ? ಆದ್ದರಿಂದ ಮಧ್ಯದಲ್ಲಿ ಪಾತ್ರಗಳನ್ನು ಬದಲಾಯಿಸಿ ವೀಕ್ಷಕರಿಗೆ ಕಿರಿ ಕಿರಿಯನ್ನುಂಟು ಮಾಡುವದು ಸಾಧುವಲ್ಲ.

–ಮುರಲೀಧರ ಕುಲಕರ್ಣಿ, ಬೀದರ್

### ಎರಡರಲ್ಲೂ ಅವರೇ ಪಾತ್ರಧಾರಿಗಳು

'ಈ ಟಿವಿ'ಯ 'ಮುಕ್ತ–ಮುಕ್ತ ಹಾಗೂ 'ಶುಭ ಮಂಗಳ' ಎರಡೂ ಧಾರಾವಾಹಿಗಳಲ್ಲಿ ಬರುವ ಅನೇಕ ಪಾತ್ರಧಾರಿಗಳ ನಟನೆಯಲ್ಲಿ ಹೆಚ್ಚಿನ ವ್ಯತ್ಯಾಸಗಳೇ ಕಾಣುವುದಿಲ್ಲ. ಕಾರಣ ಎರಡರಲ್ಲೂ ಅವರೇ! ಮಂಡ್ಯ ರವಿ, ಸುಷ್ಮಾ, ಹರಿಕೃಷ್ಣ, ಅಲಕನಂದಾ, ಹುಲಿವಾನ, ದೀಪಾ ಅಯ್ಯರ್ ಎರಡರಲ್ಲೂ ಮಾಡಿದ್ದಾರೆ. ರಾತ್ರಿ 9ರಿಂದ 10ರ ವರೆಗೆ ಎರಡು ಧಾರಾವಾಹಿಗಳಲ್ಲೂ ಅವೇ ಮುಖಗಳನ್ನು ನೋಡಬೇಕು! ಪಾತ್ರದ ಹೆಸರುಗಳು ಮಾತ್ರ ಬೇರೆ! ಹೀಗೇಕೆ?

–ಕೊ.ಸು. ನರಸಿಂಹಮೂರ್ತಿ, ಮೈಸೂರು

### ಕರಾವಳಿಯ ಉದ್ದ ಎಷ್ಟು?

ಈ ಟಿವಿಯ 'ರಾಜ ರಾಣಿ' ಕುರಿತು ಪ್ರತಿಕ್ರಿಯಿಸಿರುವ ಎನ್.ಪ್ರಕಾಶ್, ಕರ್ನಾಟಕದ ಕರಾವಳಿಯ ಉದ್ದ 400 ಕಿ.ಮೀ. ಎಂದು ತಿಳಿಸಿದ್ದಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆ–42, ಉಡುಪಿ–98 ಉತ್ತರ ಕನ್ನಡ–160 ಕಿ.ಮೀ. ಹೀಗಾಗಿ ಕರ್ನಾಟಕದ ಕರಾವಳಿಯ ಉದ್ದ ನಿಖರವಾಗಿ 300 ಕಿ.ಮಿ. (ಬಂದರು ಮತ್ತು ಮೀನುಗಾರಿಕಾ ಇಲಾಖೆಯಿಂದ ಪಡೆದ ಮಾಹಿತಿಯನುಸಾರ) ಮಾತ್ರ. 'ಕರ್ನಾಟಕ ಗ್ಯಾಜೆಟಿಯರ್'ನಲ್ಲಿ 400 ಕಿ.ಮೀ. ಎಂದು ದಾಖಲಿಸಿರುವುದು ರಾಜ್ಯ ಪುನರ್ವಿಂಗಡನೆಯ ಮೊದಲಿನ ಮಾಹಿತಿಯಂತೆ. ಆಗ ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲೆಯ ಭಾಗವೇ ಆಗಿತ್ತು.

–ಭಾಸ್ಕರ ಭಟ್ಟ ನವಿಲಗೋಣ, ಮಂಗಳೂರು

### ಶಭಾಷ್! ಶಭಾಷ್!!

ಝೀ ಕನ್ನಡ ವಾಹಿನಿಯ 'ಶಭಾಷ್ ಇಂಡಿಯಾ'ದ ಕೆಲವು ಕಾರ್ಯಕ್ರಮಗಳನ್ನು ನೋಡಿದರೆ ಮೈಜುಂ ಎನ್ನುತ್ತದೆ. ರಾಜೇಶ್ ಅವರ ನಿರೂಪಣೆಯೂ ಉತ್ತಮವಾಗಿರುತ್ತದೆ.

–ಬಿ.ಎಸ್.ಮುಳ್ಳೂರ, ಹಲಗತ್ತಿ

### ಸಂತೋಷ ತಂದ ಸಂತಸ!

ಕಿರುತೆರೆಯ ಉತ್ತಮ ನಟ ಬೆಳಗಾವಿಯ ಸಂತೋಷ ಝಾವರೆ ಬಗ್ಗೆ 'ಈ ವಾರ ನಮ್ಮೊಂದಿಗೆ'ಯಲ್ಲಿ ಸಂದರ್ಶನ ಓದಿ ಸಂತೋಷವಾಯಿತು.

–ಎಚ್.ಆನಂದ ಕುಮಾರ್/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ, ಬಿ.ಆರ್.ಚೌಗುಲೆ, ಎಂ.ಎಸ್.ಬಿರಾದಾರ, ಬೆಳಗಾವಿ, ಎಚ್.ಎಂ.ಕಾಳಮ್ಮ, ಬಸರಕೋಡು